# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | FRIDAY | 10-2-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಜಾಗತಿಕ ಕಚ್ಚಾ ಗೋಡಂಬಿ ಉತ್ಪಾದನೆ ಹೆಚ್ಚಳ

ಜಾಗತಿಕವಾಗಿ ವರ್ಷದಿಂದ ವರ್ಷಕ್ಕೆ ಗೋಡಂಬಿ ಕೃಷಿ ವಿಸ್ತರಣೆ, ಬೆಳೆಗೆ ಪೂರಕ ಹವಾಮಾನ ಇವುಗಳಿಂದ ಈ ವರ್ಷ ಕಚ್ಚಾ ಗೋಡಂಬಿ ಉತ್ಪಾದನೆ ಜಾಗತಿಕವಾಗಿ 15 ರಿಂದ 20 ಶೇಕಡಾ ಹೆಚ್ಚಳವಾಗಬಹುದೆನ್ನಲಾಗಿದೆ. ಗೋಡಂಬಿ ತಿರುಳು ರಫ್ತು ಬೇಡಿಕೆ ಮಂದಗತಿಯಲ್ಲಿದ್ದು ಹಿಂದಿನ ವರ್ಷಕ್ಕಿಂತ ದರ ಕಡಿಮೆಯಾಗಿದೆ, ಆದರೂ ಕಚ್ಚಾ ಗೋಡಂಬಿ ದರ ಹೆಚ್ಚಳದಲ್ಲೇ ಇದೆ. ಆಮದುದಾರರು ಹೆಚ್ಚಿನ ದರದಲ್ಲಿ ಹೆಚ್ಚಿನ ಪ್ರಮಾಣದ ಆಮದಿಗೆ ಆಸಕ್ತಿ ವಹಿಸಿದರೆ ದರ ಹೆಚ್ಚಳಕ್ಕೆ ಪೂರಕವಾಗಬಹುದು. ಖರೀದಿ ವಿಳಂಬಿಸಿದಲ್ಲಿ, ಉತ್ಪಾದನೆಯೂ ಹೆಚ್ಚಳವಿರುವುದರಿಂದ ದರ ಇಳಿಕೆಯಾಗುವ ಸಾಧ್ಯತೆಯಿದೆ.

## ವಿಯೆಟ್ನಾಂನ ಗೋಡಂಬಿ ತಿರುಳು ರಫ್ತು ಬೇಡಿಕೆ ಇಳಿಕೆ

ಪ್ರಮುಖ ಆಮದು ದೇಶಗಳಾದ ಯು.ಎಸ್.ಯು.ಕೆ ಗಳ ವರ್ತಕರು ಸಾಮಾನ್ಯವಾಗಿ ವರ್ಷದ 3 ನೇ ಕಾಲು ವರ್ಷದ ತನಕ ಮುಂಗಳವಾಗಿ ಗೋಡಂಬಿ ತಿರುಳು ಆಮದು ಮಾಡಿಕೊಳ್ಳಲು ಕರಾರು ಮಾಡಿ ಕೊಂಡಿಲ್ಲವೆನ್ನಲಾಗಿದೆ. ಆದರೆ ಈ ವ್ರರ್ಷ ಕರಾರು ಮಾಡಿಕೊಂಡಿಲ್ಲವೆನ್ನಲಾಗಿದ್ದು, ಮಾಡಿದರೂ ವರ್ಷದ ಕೊನೆಯ ಕಾಲುಭಾಗದಲ್ಲಿ ಮಾಡಿದ್ದು, ಪ್ರಥಮ ಭಾಗದಲದಲಿ ರಫ್ತು ಇಳಿಕೆಯಾಗಬಹುದೆನ್ನಲಾಗಿದ್ದು, ದರವೂ ಕಡಿಮೆಯೆನ್ನಲಾಗಿದೆ. ಗೋಡಂಬಿ ತಿರುಳು ಸಂಸ್ಕರಣಾ, ನಿರ್ವಹಣಾ ಮತ್ತಿತರ ವೆಚ್ಚಗಳು ಹೆಚ್ಚಳವಾಗಿದ್ದು, ಅಲ್ಲಿನ ಸಂಸ್ಕರಣಾಗಾರರು ಅವಸರದಲ್ಲಿ ಕಚ್ಚಾ ಗೋಡಂಬಿ ಆಮದು ಮಾಡದಿರಲು ಸೂಚಿಸಲಾಗಿದೆಯೆನ್ನಲಾಗಿದೆ. ಭಾರತದಲ್ಲಿ ರಫ್ತು ಬೇಡಿಕೆ ಕಡಿಮೆಯಾದರೂ, ಆತಂರಿಕ (ದೇಶೀ) ಬೇಡಿಕೆ ಉತ್ತಮವಿದೆಯೆನ್ನಲಾಗಿದ್ದು, ಇಲ್ಲಿನ ಸಂಸ್ಕರಣೆದಾರರಿಗೆ ಅನುಕೂಲಕರವಾಗಬಹುದಾಗಿದೆ. ದೇಶೀ ಕಚ್ಚಾ ಗೋಡಂಬಿ ಬೆಳೆಯೂ ಉತ್ತಮವಾಗಿ ಕಚ್ಚಾ ಗೋಡಂಬಿ ಉತ್ಪಾದನೆ ಈ ವರ್ಷ ಹಿಂದಿನ ವರ್ಷಕ್ಕಿಂತ ಹೆಚ್ಚಳವಾಗುವ ಸಾಧ್ಯತೆಯಿದೆ.

## ತಿಂಗಳ ಗರಿಷ್ಠ ಮಟ್ಟಕ್ಕೇರಿದ್ದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಸ್ವಲ್ಪ ಇಳಿಕೆ

ಒಂದು ತಿಂಗಳ ಗರಿಷ್ಠ ಮಟ್ಟ ತಲುಪಿದ್ದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಜಾಗತಿಕವಾಗಿ ಪರ್ಯಾಯ ಖಾದ್ಯತೈಲಗಳ ಪೂರೈಕೆ ಹೆಚ್ಚಳ, ದರ ಇಳಿಕೆ ಹಾಗೂ ಡೀಲರ್‌ಗಳು ಲಾಭ ಗಳಿಕೆಯ ಆಸಕ್ತಿಯಿಂದ ಸ್ವಲ್ಪ ಮಟ್ಟದ ಇಳಿಕೆ ದಾಖಲಿಸಿದೆಯೆನ್ನಲಾಗಿದೆ. ಮಲೇಶೀಯಾದ ಪಾಮೆಣ್ಣೆ ರಫ್ತು 19 ರಿಂದ 25 ಶೇಕಡಾ ತನಕ ಇಳಿಕೆಯಾಗಲಿದೆಯೆಂದು ಅಂದಾಜಿಸಲಾಗಿದೆಯೆನ್ನಲಾಗಿದೆ. ಪ್ರಮುಖ ಆಮದುದಾರ ದೇಶಗಳ ಚೈನಾ, ಭಾರತಗಳಿಂದ ಆಮದು ಇಳಿಕೆ ಮುಂತಾದ ಕಾರಣಗಳಿಂದ ರಫ್ತು ಇಳಿಕೆಯಾಗಬಹುದೆನ್ನಲಾಗಿದೆ.

## ಸುಧಾರಣೆಯಾಗದ ಅಡಿಕೆ ದರ

ಅಡಿಕೆ ದರ ಇಳಿಕೆಯ ಸ್ಥಿತಿಯಲ್ಲೇ ಇದ್ದು ಸುಧಾರಣೆ ಕಾಣುತ್ತಿಲ್ಲ, ದರ ಇಳಿಕೆಗೆ ನಿಖರ ಕಾರಣ ಲಭ್ಯವಾಗುತ್ತಿಲ್ಲ. ಬೇಡಿಕೆ ಇಳಿಕೆ, ಖರೀದಿದಾರರಲ್ಲಿ ಆರ್ಥಿಕ ಸಂಪನ್ಮೂಲಗಳ ಹರಿವು ಇಳಿಕೆ ಇತ್ಯಾದಿ ಸಮಸ್ಯೆಗಳಿವೆಯೆನ್ನಲಾಗುತ್ತಿದೆ. ಇದರೊಂದಿಗೆ ಅಡಿಕೆಯ ಗುಣಮಟ್ಟ ಕುಸಿತ ಕೆಲವಡೆ ದರಕ್ಕೆ ಹಿನ್ನಡೆ ತಂದಿದೆಯೆನ್ನಲಾಗಿದೆ. ದರ ಇಳಿಕೆಯಿಂದ ಮಾರುಕಟ್ಟೆಗೆ ಆವಕವಾಗುತ್ತಿರುವ ಅಡಿಕೆ ಪ್ರಮಾಣ ಇಳಿಕೆಯಾಗಿದೆಯೆನ್ನಲಾಗಿದೆ. ಈಗಿನ ಪರಿಸ್ಥಿತಿ ಬೇಡಿಕೆ ಹೆಚ್ಚಳವಾಗುವ ತನಕ ಮುಂದುವರಿಯಬಹುದು.

## ಸಕ್ಕರೆ ದರ ಹೆಚ್ಚಳ ಸಾಧ್ಯತೆ

ಉತ್ಪಾದನೆ ಈ ಹಿಂದಿನ ಅಂದಾಜಿಗಿಂತ ಇಳಿಕೆಯಾಗುವ ಸಾಧ್ಯತೆ, ಉತ್ಪಾದನೆಯ ವೇಗ ಇಳಿಕೆ, ಇವುಗಳಿಂದ ಪೂರೈಕೆ ಕಡಿಮೆಯಾಗಲೂ ಬಹುದು. ಬೇಸಿಗೆ ಆರಂಭವಾಗುತ್ತಿರುವುದರಿಂದ ವಿವಿಧ ಬೇಡಿಕೆಗಳು ಹೆಚ್ಚಳವಾಗುವ ಸಾಧ್ಯತೆಯಿದೆ. ಬೇಡಿಕೆ ಹೆಚ್ಚಳದಿಂದ ದರ ಹೆಚ್ಚಳವಾಗುವ ಸಾಧ್ಯತೆಯಿದೆ. ಇಳಿಕೆ ಕಂಡಿದ್ದ ದರ ಹೆಚ್ಚಳವಾಗುವ ಸೂಚನೆ ಕಾಣುತ್ತಿದೆ.